# ಆಕರ್ಷಕ ಖೆಡ್ಡಾ

## ಬೇಟ-ಬೇಟೆ ವಿಷಯ-ವಿಷ

■ ಸುಧೀಂದ್ರ ಪ್ರಸಾದ್ ಇ.ಎಸ್.

ಬೇಲಿ ಜಿಗಿಯುವುದು ಮನುಕುಲದ ಆರಂಭದಿಂದಲೂ ಗಂಡು – ಹೆಣ್ಣು ಮೀರಲಾಗದ ಒಂದು ಪ್ರಕ್ರಿಯೆ. ವಿಶೇಷವಾಗಿ ಗಂಡಿಗೆ, ದಾಂಪತ್ಯದಾಚೆಗಿನ ಸಂಬಂಧಗಳ ಬಗ್ಗೆ ತೀರದ ಆಕರ್ಷಣೆ. ಈ ವ್ಯಸನವನ್ನೇ ದಾಳವಾಗಿಸಿಕೊಂಡು ಸುಲಿಗೆ ಮಾಡುವ ಸಂಚಿಗೊಂದು ಮೋಹಕ ಹೆಸರು ‘ಹನಿ ಟ್ರ್ಯಾಪ್’.ಮಿಕವನ್ನು ತೋರಿಸಿ ಹುಲಿಶಿಕಾರಿ ಮಾಡುವ ಬೇಟೆಯ ತಂತ್ರ ಇಲ್ಲೂ ಇದೆ. ಮಿಕದ ರೂಪದಲ್ಲಿನ ಹೆಣ್ಣು ಸುಲಭಕ್ಕೆ ಸಿಗುತ್ತಾಳೆ ಎಂದು ಗಂಡು ಭಾವಿಸಿ ಹೆಜ್ಜೆ ತಪ್ಪಿದರೆ, ಮಿಕದೊಂದಿಗೆ ಅದರ ಹಿಂದಿನ ಬೇಟೆಗಾರನೂ ಮೇಲೆರಗುತ್ತಾನೆ. ಬೇಟವೇ ಬೇಟೆಯ ಆಟವಾಗಿ ಪರ್ಯವಸಾನಗೊಳ್ಳುತ್ತದೆ. ಶ್ರೀಮಂತರನ್ನು, ಅರಸ – ಅಧಿಕಾರಿಗಳನ್ನು ಬಲೆಗೆ ಕೆಡವಿಕೊಳ್ಳಲು ಬಳಕೆಯಾಗುತ್ತಿದ್ದ ಹನಿಟ್ರ್ಯಾಪ್ ಎನ್ನುವ ಖೆಡ್ಡದ ಬಾಯಿ ಈಗ ಜನಸಾಮಾನ್ಯನತ್ತಲೂ ತಿರುಗಿದೆ.‘ಹನಿ ಟ್ರ್ಯಾಪ್’ನ ಹಲವು ಆಯಾಮಗಳನ್ನು ಚರ್ಚಿಸುವ ‘ಸುಧಾ’ ಅಗ್ರಲೇಖನ, ಈ ಹೊತ್ತಿನ ಸಾಮಾಜಿಕ ಸಂಬಂಧಗಳ ವಿಷಮತೆಯೊಂದಿಗೆ, ವೈಯಕ್ತಿಕ ಜೀವನಕ್ಕೆ ಅಗತ್ಯವಾದ ನೈತಿಕತೆಯ ಅಗತ್ಯವನ್ನು ಒತ್ತಿಹೇಳುತ್ತದೆ.



